

# ದೀಪಿಕಾ ಕೈಕೊಟ್ಟಾಗ!

ಬಾಲಿವುಡ್‌ನಲ್ಲಿ ಅತ್ಯಂತ ವೃತ್ತಿಪರ, ಬದ್ಧತೆಯುಳ್ಳ ನಟಿಯೆಂದರೆ ಅದು ದೀಪಿಕಾ ಪಡುಕೋಣೆ ಎಂದು ಎಲ್ಲರೂ ಕೊಂಡಾಡುತ್ತಿದ್ದರು. ಇಂತಹ ಸಂಭಾವಿತೆ ದೀಪಿಕಾ ಬಗ್ಗೆ ಈಗ ಅಸಮಾಧಾನದ ಕಿಡಿ ಎದ್ದಿದೆ. ಹೇಳಿದ ಸಮಯಕ್ಕೆ ಚಿತ್ರೀಕರಣಕ್ಕೆ ಹಾಜರಾಗುತ್ತಿದ್ದ ಡಿಪ್ಸ್, ಹೇಳದೇ ಕೇಳದೇ ಸಿನಿಮಾವೊಂದರ ಚಿತ್ರೀಕರಣ ಅರ್ಧದಲ್ಲೇ ಮೊಟಕುಗೊಳಿಸಿ ನಾಪತ್ತೆಯಾಗಿದ್ದರಂತೆ. ಶಾಟ್‌ಗೆ ಸಿದ್ಧತೆ ಮಾಡಿಕೊಂಡ ಚಿತ್ರತಂಡ ದೀಪಿಕಾಗೆ ಹುಡುಕಾಡಿದರೆ ಆಕೆ ಪತ್ತೆಯೇ ಇಲ್ಲ. 'ದೀಪಿಕಾಗೆ ಹುಷಾರಿಲ್ಲ. ಹೀಗಾಗಿ ತುರ್ತಾಗಿ ಮುಂಬೈನ ಮನೆಗೆ ಮರಳಿ ವಿಶ್ರಾಂತಿ ಪಡೆಯುತ್ತಿದ್ದಾರೆ' ಎಂದು ಆಕೆಯ ಮ್ಯಾನೇಜರ್ ಅಧಿಕೃತ ಹೇಳಿಕೆ ನೀಡಿ ಪರಿಸ್ಥಿತಿಯನ್ನು ನಿಭಾಯಿಸಿದರಂತೆ.

ಇಷ್ಟೇ ಆಗಿದ್ದರೆ ಕಿಡಿ ದೊಡ್ಡದಾಗುತ್ತಿರಲಿಲ್ಲವೇನೋ. ಸಿನಿ ಕಲಾವಿದರ ಜಾಡು ಹಿಂಬಾಲಿಸುವ ಸ್ವಭಾವದ ಪತ್ರಕರ್ತರೊಬ್ಬರು ದೀಪಿಕಾರ ಖಾಸಗಿ ಮೊಬೈಲ್ ನಂಬರ್‌ಗೆ ಕರೆ ಮಾಡಿದರಂತೆ. ಆಗ ಅವರ ಕಿವಿಗೆ ಕೇಳಿದ್ದು 'ನೀವು ಕರೆ ಮಾಡಿರುವ ಚಂದಾದಾರರು ಇನ್ನೊಂದು ಕರೆಯಲ್ಲಿ ನಿರತ ರಾಗಿದ್ದಾರೆ...' ಎಂಬ ಅಚ್ಚಗನ್ನಡ ಸಂದೇಶ. ಸರಿ, ದೀಪಿಕಾ ಮುಂಬೈನಲ್ಲೇ ಇಲ್ಲ, ಆಕೆಯ ಮ್ಯಾನೇಜರ್ ಹೇಳಿದ್ದೆಲ್ಲಾ ಕಟ್ಟುಕಥೆ ಎಂದು ಸುದ್ದಿ ಪ್ರಕಟವಾಯಿತು.

ಸುದ್ದಿ ನೋಡಿ ಸಿಟ್ಟಿಗೆದ್ದವರು ಆಕೆಯ ತಂದೆ ಪ್ರಕಾಶ್ ಪಡುಕೋಣೆ. ಮೊಬೈಲ್ ಕಂಪೆನಿಯ ಕಸ್ಟಮರ್ ಕೇರ್ ವಿಭಾಗಕ್ಕೆ ಕರೆ ಮಾಡಿ ಸ್ವಯಂಚಾಲಿತ ಪ್ರತಿಕ್ರಿಯೆ ಪದ್ಧತಿಗೆ ಪ್ರಾದೇಶಿಕ ಭಾಷೆ ಅಳವಡಿಸಿರುವುದರ ವಿರುದ್ಧ ಬೈಯ್ದಾಡಿದರಂತೆ. ಸುದ್ದಿ ನಿಜವೋ ಸುಳ್ಳೋ ಗೊತ್ತಿಲ್ಲ; ಗದ್ದಲ ಎದ್ದಿರುವುದಂತೂ ನಿಜ!



# ಬಿಕಿನಿ ಒಲ್ಲೆ ಎಂದ ಸೋನಾಕ್ಷಿ

ಬಾಲಿವುಡ್‌ನಲ್ಲಿ ಇತ್ತೀಚಿನ ವರ್ಷಗಳಲ್ಲಿ ಅತಿ ಹೆಚ್ಚು ಗಮನ ಸೆಳೆದಿರುವ ತಾರೆ ಸೋನಾಕ್ಷಿ ಸಿನ್ಹಾ. ಆಕೆ ಸಲ್ಮಾನ್ ಖಾನ್ ಜೊತೆ ನಟಿಸಿದ 'ದಬಾಂಗ್' ಗೆದ್ದದ್ದು ಮಾತ್ರವಲ್ಲ, ಕೋಟಿ ಕ್ಲಬ್‌ನ ಸದಸ್ಯೆಯೂ ಆದರು. ಆದರೆ ಸೋನಾಕ್ಷಿ ಚಿತ್ರದಲ್ಲಿ ಬಿಕಿನಿ ಹಾಕಿ ನಟಿಸಲು ಬಿಲ್‌ಕುಲ್ ಒಪ್ಪುತ್ತಿಲ್ಲವಂತೆ.

ಶಾಹಿದ್ ಕಪೂರ್ ನಾಯಕರಾಗಿರುವ 'ರ್‍ಯಾಂಬೋ ರಾಜ್‌ಕುಮಾರ್' ಚಿತ್ರದಲ್ಲಿ ನಾಯಕಿ ನೀರಿನಿಂದ ಎದ್ದು ಬರುವ ಸನ್ನಿವೇಶವಿದೆ. 'ಆದರೆ ಬಿಕಿನಿ ಬೇಡ, ಪ್ರೇಕ್ಷಕರಿಗೆ ಸೀರೆಯೇ ಸಾಕು' ಎಂದರಂತೆ ಸೋನಾಕ್ಷಿ. ಸೀರೆಯಲ್ಲಿಯೇ ತೋಯ್ದು ತೊಪ್ಪೆಯಾಗಿ ಈಜುಕೊಳದಿಂದ ಮೇಲೆ ಬಂದರಂತೆ. ಈ ಒದ್ದೆ ಸೀರೆಯ ಸೋನಾಕ್ಷಿಯನ್ನು ನೋಡಿದವರು, ಬೇರೆ ಬಿಕಿನಿ ತಾರೆಯರನ್ನು ಖಂಡಿತಾ ಇಷ್ಟಪಡುವುದಿಲ್ಲ ಎಂದೀಗ ಬಾಲಿವುಡ್‌ನಲ್ಲಿ ಸುದ್ದಿ ಹಬ್ಬಿದೆ. ಸೋನಾಕ್ಷಿಯ ಆ ಈಜುಕೊಳದ ಸೀನ್ ಅಷ್ಟೊಂದು ಹಾಟ್ ಆಗಿದೆಯಂತೆ!

■ ಅಮಿ

# ಮತ್ತೆ ಡೈವೋರ್ಸ್!

ಹೃತಿಕ್ ರೋಷನ್ ಮತ್ತು ಸೂಸನ್ ದಾಂಪತ್ಯದಲ್ಲಿ ಬಿರುಕು ಕಂಡಿದೆಯಂತೆ. ಇಬ್ಬರೂ ಬೇರೆಯಾಗುತ್ತಾರಂತೆ! ಹಾಗಂತ ಮತ್ತೆ ಸುದ್ದಿ ಹಬ್ಬಿದೆ.

ಮೊನ್ನೆ 'ಕ್ರಿಶ್ 3' ಪ್ರಚಾರದಲ್ಲಿ ಹೃತಿಕ್ ಕಾಣಿಸಿಕೊಂಡಾಗ ಸೂಸನ್ ತಂದೆ ಸಂಜಯ್ ಖಾನ್, ತಾಯಿ ಜರೀನಾ ಖಾನ್, ಸೋದರ ಜಾಯೆದ್ ಖಾನ್ ಮತ್ತು ಆತನ ಪತ್ನಿ ಮಲೈಕಾ ಎಲ್ಲರೂ ಜೊತೆಗಿದ್ದರಂತೆ. ಆದರೆ ಸೂಸನ್ ಮಾತ್ರ ಎಲ್ಲೂ ಕಾಣಲಿಲ್ಲ. ಅದರ ಬೆನ್ನಲ್ಲೇ 'ಇಬ್ಬರೂ ಬೇರೆಯಾಗಲು ನಿರ್ಧರಿಸಿದ್ದು, ಡೈವೋರ್ಸ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಅಲ್ಲದೆ ಸೂಸನ್ ತಮ್ಮ ತಂದೆಯ ಮನೆಗೆ ಮರಳಿದ್ದಾರೆ' ಎಂದು ಸುದ್ದಿ ಹಬ್ಬಿತು.

ಇಬ್ಬರ ಡೈವೋರ್ಸ್ ಸುದ್ದಿಯನ್ನು ಈ ಹಿಂದೆ ಹಲವು ಬಾರಿ ಕೇಳಿ ಬೇಸತ್ತಿದ್ದ ಕೆಲವರು ಅದರೊಳಗಿನ ಸತ್ಯವನ್ನು ಕೆದಕಲು ಮುಂದಾದರು. ಹೀಗೆ ಸಂಶೋಧನೆ ನಡೆಸಿದಾಗ 'ಡೈವೋರ್ಸ್ ಸುದ್ದಿ ಹೊತ್ತಿಕೊಳ್ಳುವುದು ಹೃತಿಕ್ ಚಿತ್ರ ಬಿಡುಗಡೆ ಸಂದರ್ಭದಲ್ಲಿಯೇ' ಎಂಬುದು ಗೊತ್ತಾಯಿತು! ಇದೆಲ್ಲಾ ಪಬ್ಲಿಸಿಟಿ ಗಿಮಿಕ್ ಎನ್ನುವುದು ಹಲವರ ತರ್ಕ. 'ಕ್ರಿಶ್ 3' ಬಿಡುಗಡೆಯ ಬಳಿಕ ಸತ್ಯ ಬಹಿರಂಗವಾಗುತ್ತದೆ ಬಿಡಿ!

